International Journal of Kannada Research 2017; 3(4): 44-46

International Journal of Kannada Research
www.kannadajournal.com

**ISSN: 2454–5813**
IJSR 2017; 3(4): 44-46
© 2017 IJKS
www.kannadajournal.com
Received: 18-08-2017
Accepted: 21-09-2017

**ಡಿ. ಸುಂದರಿ**
ಸಹಾಯಕ ಪ್ರಾಧ್ಯಾಪಕರು
ಮಹಿಳಾ ಸರ್ಕಾರಿ ಕಾಲೇಜು
(ಸ್ವಾಯತ್ತ) ಮಂಡ್ಯ, ಕರ್ನಾಟಕ,
ಭಾರತ

**Correspondence**
**ಡಿ. ಸುಂದರಿ**
ಸಹಾಯಕ ಪ್ರಾಧ್ಯಾಪಕರು
ಮಹಿಳಾ ಸರ್ಕಾರಿ ಕಾಲೇಜು
(ಸ್ವಾಯತ್ತ) ಮಂಡ್ಯ, ಕರ್ನಾಟಕ,
ಭಾರತ

# ವಚನ ಚಳುವಳಿ ಮತ್ತು ಸಶಕ್ತ ಮಹಿಳೆ

**ಡಿ. ಸುಂದರಿ**

**DOI:** 'https://doi.org/10.22271/24545813.2017.v3.i4a.1072

**ಪೀಠಿಕೆ**

ಹನ್ನೆರಡನೇ ಶತಮಾನದ ಶರಣಧರ್ಮದ ಆಂದೋಲನವು ವರ್ಣವ್ಯವಸ್ಥೆಯ ವಿರುದ್ಧ ಸಮರ್ಥವಾದ ಹೋರಾಟಕ್ಕೆ ಮಾತ್ರವೇ. ಸೀಮಿತವಾಗಿದೆ. ಸ್ತ್ರೀಯರ ಸ್ಥಾನಮಾನಗಳನ್ನು ಪರಸ್ಪರ ಪ್ರೀತಿ–ಗೌರವಗಳ ಆಧಾರದ ಮೇಲೆ ಸ್ಥಾಪಿಸಿ, ಪರಂಪರೆಯ ಸಂಕೋಲೆಗಳಿಂದ ಬಂಧಿತಳಾಗಿ–ಶೋಷಣೆಗೊಳಗಾಗಿದ್ದ ಸ್ತ್ರೀ ಸಮೂಹವನ್ನು ಸಮಾನ ನೆಲೆಗೆ ತಂದು ನಿಲ್ಲಿಸುವ ದೃಢಸಂಕಲ್ಪವನ್ನು ಮಾಡಿ ನುಡಿದಂತೆ ನಡೆದುದನ್ನು ಕಾಣಬಹುದು.

ಆದರೆ ವಚನ ಚಳುವಳಿಯ ಪೂರ್ವದತ್ತ ಹೊರಳಿ ನೋಡಿದರೆ ಸ್ತ್ರೀಯ ಸ್ಥಿತಿ ಸುಭದ್ರತೆಯಿಂದೇನೂ ಇರಲಿಲ್ಲವೆಂಬುದು ಸತ್ಯಸ್ಯ ಸತ್ಯ. ವೈದಿಕ ಸಂಸ್ಕೃತಿಯಲ್ಲಿ ತಾಯಿಯ ಸ್ಥಾನದಲ್ಲಿ ಅತಿಯಾಗಿ ವೈಭವೀಕರಿಸಲ್ಪಟ್ಟ ಹೆಣ್ಣು ವಾಸ್ತವಿಕ ನೆಲೆಯಲ್ಲಿ ಎರಡನೆದರ್ಜೆಯ ಪ್ರಜೆಯಾಗಿ, ಪತಿಯ ಅಜ್ಞಾನುಸಾರಿಣಿಯಾಗಿ, ಅನುಯಾಯಿಯಾಗಿ ಸ್ವತಂತ್ರ ವ್ಯಕ್ತಿತ್ವವಿಲ್ಲದ ಪ್ರಾಣಿಯಂತಿದ್ದುದು ನೋವಿನ ಸಂಗತಿ. ವೇದಗಳ ಕಾಲದಲ್ಲಿ ಸಹಗಮನಪದ್ಧತಿ ಇರಲಿಲ್ಲವೆಂತಲೂ, ಅಂತೆಯೇ ಮಹಿಳೆಯರಿಗೆ ಅವಕಾಶಗಳಿದ್ದವೆಂತಲೂ ಹೇಳುತ್ತಾರೆ. ಅದಕ್ಕೆ ಪುಷ್ಟಿ ನೀಡುವಂತೆ ಗಾರ್ಗಿ , ಮೈತ್ರೇಯಿ, ಲೋಪಮುದ್ರಾ, ಸುಲಭಾ, ಘೋಷಾರಂತಹ ಕೆಲವು ಮಹಿಳೆಯರಿಗೆ ಪಾಂಡಿತ್ಯ ಹೊಂದಿದ್ದರು ಆದರೆ ವೇದಗಳ ಕಾಲವೆಂದು ಗುರುತಿಸಲಾಗುವ ಕ್ರಿ.ಪೂ 2500 ರಿಂದ ಕ್ರಿ.ಪೂ 1500 ರ ಅವಧಿಯಲ್ಲಿ ಮಗಳ ಜನನಕ್ಕಿಂತ ಮಗನ ಜನನವನ್ನು ಬಯಸುತ್ತಿದ್ದರೆಂದು ತಿಳಿದುಬರುತ್ತದೆ. ಹೀಗಾಗಿ ವೇದಕಾಲವೂ ಮಹಿಳೆಯ ಸಮಾನತೆಯ ವಿಷಯಕ್ಕಾಗಿ ಗಮನಸೆಳೆಯುವುದಿಲ್ಲ.

ಇನ್ನು ಮುಂದುವರಿದು ಬೌದ್ಧಧರ್ಮದ 'ಬುದ್ಧ ಸಂಘ'ದಲ್ಲಿ ಅನೇಕ ಮಹಿಳೆಯರಿದ್ದುದು ಆಶಾದಾಯಕವಾಗಿದ್ದು, ಅಶೋಕನ ಮಗಳು 'ಸಂಗಮಿತ್ರೆ' ಧರ್ಮಪ್ರಚಾರಕಿಯಾಗಿದ್ದುದು ಗಮನ ಸೆಳೆಯುತ್ತದೆ. ಆದರೆ ಜೈನ ಧರ್ಮದಲ್ಲಿ ಸ್ತ್ರೀಗೆ ಇಂತಹ ಅವಕಾಶಗಳಿರಲಿಲ್ಲ. ಜೈನಧರ್ಮದ 63 ಜನ ಶಲಾಕಪುರುಷರಲ್ಲಾಗಲಿ, 24 ಜನ ತೀರ್ಥಂಕರರಲ್ಲಾಗಲಿ ಒಬ್ಬ ಸ್ತ್ರೀಯೂ ಕಾಣುವುದಿಲ್ಲ.

ಮುಂದೆ ಪಿತೃಪ್ರಧಾನ ಸಂಸ್ಕೃತಿ ಬೆಳೆದು ನಿಂತಾಗ ಸ್ತ್ರೀಯ ಸ್ಥಿತಿ ಚಿಂತಾಜನಕವಾಯಿತು. ವರ್ಣಾಶ್ರಮ ಧರ್ಮವು ಸ್ತ್ರೀಯರನ್ನು, ದಲಿರತನ್ನು ಮೂಲೆಗುಂಪು ಮಾಡಿತು. ಚಾತುರ್ವರ್ಣ ವ್ಯವಸ್ಥೆಯಲ್ಲಿ ಸ್ತ್ರೀಗಾಗಲಿ, ದಲಿತರಿಗಾಗಲಿ ಸ್ಥಳವೇ ಇಲ್ಲವಾಗಿ ದಲಿತ ಪಂಚಮನಾದ' ಸ್ತ್ರೀ, ಶೂದ್ರತಿಶೂದ್ರಳಾದಳು. ವರ್ಣವ್ಯವಸ್ಥೆಯಲ್ಲಿಯೇ ಮೇಲಿರುವ ವಿಪ್ರನ ಷಟ್ಕರ್ಮಗಳಲ್ಲಿ ಅವಳ ಪಾಲಿಲ್ಲ. ಇತಿಹಾಸದಲ್ಲಿ ಕೆಲವು ಪ್ರಸಿದ್ಧ ಅಪವಾದಗಳನ್ನು ಹೊರತು ಪಡಿಸಿದರೆ ಸ್ತ್ರೀಕುಲ ಅಕ್ಷರ ಸಂಸ್ಕೃತಿಯಿಂದ ವಂಚಿತವಾಯಿತು.

ಅಂದಿಗೆ 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬುದು ಸಾಮಾನ್ಯವಾಗಿ ಪ್ರಜ್ಞಾತೀತವಾಗಿ ಒಪ್ಪಿಕೊಂಡ ನಿಲುವು ಹಾಗಾಗಿಯೇ ವೈದಿಕ ಸಂಸ್ಕೃತಿಯಲ್ಲಿ ಹೆಣ್ಣಿಗೆ ಯಜ್ಞೋಪವೀತ ಧರಿಸುವ ಅಧಿಕಾರವಿಲ್ಲ. ಶ್ರಾದ್ಧಾದಿ ಪಿತೃಕಾರ್ಯಗಳಲ್ಲಿ ಪ್ರವೇಶವಿಲ್ಲ. ಬಹುಶಃ ಪ್ರಪಂಚದ ಇತರೆಡೆಯಲ್ಲೂ ಇದಕ್ಕಿಂತ ಭಿನ್ನವಾದ ಸ್ಥಿತಿ ಇರಲಿಲ್ಲ. ಹೆಣ್ಣು ಒಬ್ಬ ವ್ಯಕ್ತಿಯಲ್ಲ 'ಆಸ್ತಿ' ಎಂಬ ನಿಲುವಿದ್ದುದರಿಂದಲೇ ಆಕೆಯು ಅಪಹರಣ ಮಾಡಬಹುದಾದ, ವಿನಿಮಯ ಮಾಡಿಕೊಳ್ಳಬಹುದಾದ ವಸ್ತುವಾದಳು, ಇತಿಹಾಸದುದ್ದಕ್ಕೂ ಇದಕ್ಕೆ ಸಾವಿರಾರು ಉದಾಹರಣೆಗಳು ಲಭ್ಯ.

ಇನ್ನು ಶೈವಧರ್ಮದಲ್ಲಿ ಅನೇಕ ಗೊಂದಲಗಳಿದ್ದರೂ ಸ್ತ್ರೀಸಮಾನತೆಗೆ ಸಂಬಂಧಿಸಿದಂತೆ ಮಹತ್ವದ

ದಾಖಲೆಗಳಿವೆ. ಮತ್ತು 63 ಪುರಾತನರಲ್ಲಿ ಅನೇಕ ಮಹಿಳೆಯರಿದ್ದು ಧಾರ್ಮಿಕ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ್ದಾರೆ. ಅದು ಮುಂದುವರಿದು ವೀರಶೈವ ಸಮಾಜದಲ್ಲಿ ಹೆಣ್ಣಿಗೆ ಸಮಾನತೆ, ಸ್ವಾತಂತ್ರ್ಯ ದಕ್ಕಲಾಗಿ ಆಕೆ ಇಷ್ಟಲಿಂಗಧಾರಣೆಯ ಹಕ್ಕು ಪಡೆದಳು ಇದು ಸಾಂಕೇತಿಕವಾಗಿ ಅವಳ ಸ್ಥಾನವನ್ನು ಮೇಲೇರಿಸಿತು. ಒಮ್ಮೆಲೇ ಅವಳು ಪುರುಷನ ಸಮಾನಸ್ಕಂಧಳಾದಳು. ಭಾವನಾತ್ಮಕವಾಗಿ ಈ ಒಂದು ಚರ್ಯೆ ಅದ್ಭುತವಾದ ಪವಾಡವ'ನ್ನು ಮಾಡಿತು. ಪುರುಷಪ್ರಾಧ್ಯಾನ್ಯವಿರುವ ವ್ಯವಸ್ಥೆಯಲ್ಲಿ ಹೆಣ್ಣಿಗೆ ದೊರೆತ ಮೊದಲ ಸ್ವಾತಂತ್ರ್ಯವಿದು. 'ಲಿಂಗಧಾರಿಗಳು ಪಂಚಸೂತಕರಹಿತರು' ಎಂಬ ಧಾರ್ಮಿಕ ಘೋಷಣೆ ಅವಳನ್ನು ಮತ್ತಷ್ಟು ಮುಕ್ತಳನ್ನಾಗಿಸಿತು. ಈ ವೀರಶೈವ ಸಿದ್ಧಾಂತವನ್ನು ಒಪ್ಪಿಕೊಂಡ ವಚನ ಚಳುವಳಿ ಕೇವಲ ಧಾರ್ಮಿಕ ಸುಧಾರಣೆಯ ಹಂತಕ್ಕೆ ಮಾತ್ರ ಸ್ಥಗಿತಗೊಳ್ಳದೆ ಸಾಮಾಜಿಕ ಹೋರಾಟವನ್ನು ತೀವ್ರಗೊಳಿಸಿತು. ಆದ್ದರಿಂದಲೇ ಶರಣರ ಬದುಕು–ಬರಹಕ್ಕೆ ಇಂದು ಹೆಚ್ಚಿನ ಪ್ರಾಧಾನ್ಯತೆಯಿದೆ. ವಚನಕಾರರು ಶೂದ್ರಾತಿ ಶೂದ್ರಳೆಂಬಂತೆ ಶೋಷಣೆಗೊಳಗಾಗಿದ್ದ ಮಹಿಳೆಯರನ್ನು 'ಮಾತೆಯೆಂದು' ಗೌರವಿಸಿದರು. 'ಸಂಗಾತಿಯೆಂದು' ಮುನ್ನಡೆಸಿದರು. ಸರ್ವವಿಧದಲ್ಲಿಯೂ ಸಮಾನತೆಯ ಬದುಕನ್ನು ಕಟ್ಟಿ ನಿಲ್ಲಿಸಿದರು. ಧರ್ಮಾಚರಣೆಗೆ ಮಹಿಳೆ ತೊಡಕಿನವಳಾಗಿದ್ದಳೆಂಬಂತೆ ಭಾವಿಸಿ ಅನೇಕ ಧರ್ಮಗಳು ಮಹಿಳೆಯನ್ನು ಅಸ್ಪೃಷ್ಯಳಂತೆ ಕಂಡಿವೆ. ಆದರೆ ಶರಣರು ಇದಕ್ಕೆ ವಿರುದ್ಧವಾದ ರೀತಿಯಲ್ಲಿ ಚಿಂತನೆ ಮಾಡಿದರು. ಆದ್ದರಿಂದಲೇ ಶರಣಧರ್ಮದ ಆಂದೋಲನ ಕಾಲಘಟ್ಟದಲ್ಲಿ 32ಕ್ಕೂ ಹೆಚ್ಚು ಸ್ತ್ರೀಯರು ಆಧ್ಯಾತ್ಮ ಸಾಧನೆ ಮಾಡಿ, ವಚನಗಳನ್ನು ಬರೆದಿರುವ ದಾಖಲೆ ಇದೆ. ಅಂತೆಯೇ ದಾಖಲಾಗದೇ ವಿಸ್ಮರಣೆಯ ಹೊಳೆಯಲ್ಲಿ ಕಳೆದುಹೋಗಿರಬಹುದಾದ ನೂರಾರು ಶರಣೆಯರು ಇದ್ದಿರಬಹುದಾದ ಸಾಧ್ಯತೆಯನ್ನೂ ತಳ್ಳಿ ಹಾಕುವಂತಿಲ್ಲ.

ಕೆಳ ವರ್ಗದ ಲಿಂಗತಾರತಮ್ಯ ಸಂಕೋಲೆಗಳಿಂದ ಏಕಕಾಲದಲ್ಲಿ ಪಾರಾದ ಮಹಿಳೆಯರು ಮುಕ್ತ ಪರಿಸರದಲ್ಲಿ ಆತ್ಮೋದ್ಧಾರ ಮಾಡಿಕೊಳ್ಳಬಹುದಾದ ಹಲವು ದಾರಿಗಳನ್ನು ಕಂಡುಕೊಂಡರು. ಕೇವಲ ಭಜನೆ, ಜಪ, ವ್ರತ, ಪ್ರದಕ್ಷಿಣೆ, ಪ್ರಸಾದಗಳಿಗೆ ಸೀಮಿತವಾಗಿದ್ದ ಅವಳ ಪೂಜೆಯು ಆತ್ಮಜ್ಞಾನ, ಆತ್ಮಪರೀಕ್ಷಣೆ, ಆತ್ಮ ಜಿಜ್ಞಾಸೆಯಂತೆ ಜ್ಞಾನಮಾರ್ಗವನ್ನು ಸಹ ಆಕ್ರಮಿಸಿತು. ಪುರುಷರಿಗೆ ಸಮಾನವಾಗಿ ನಿಂತು ಇಹ–ಪರ ಸಾಧನ ಸಂಪತ್ತುಗಳ ಬಗ್ಗೆ ಸ್ವತಂತ್ರವಾಗಿ ಯೋಚಿಸತೊಡಗಿದಳು.

ಇಂತಹ ಸ್ತ್ರೀಯರ ಬಗೆಗೆ ವಚನಕಾರರು ತಳೆದ ಉದಾತ್ತ ಧೋರಣೆ, ಗೌರವ, ಮಾನವಕುಲದ ಇತಿಹಾಸದಲ್ಲಿ ಅಪೂರ್ವವೆನ್ನಬಹುದಾದದ್ದು. ಮೊತ್ತ ಮೊದಲನೆಯದಾಗಿ ಶರಣರು ಸಾಂಪ್ರದಾಯಿಕ ಜಡ ಪರಂಪರೆಯು ಸ್ತ್ರೀಕುಲಕ್ಕೆ ಅನ್ವಹಿಸಬಹುದಾದ ಹುಸಿಪುರಾಣಗಳನ್ನು ಇಲ್ಲಗೈದರು. ಸಾಮಾಜಿಕ ಧಾರ್ಮಿಕ ವಲಯಗಳಲ್ಲಿ ಪುರುಷ ಸಮಾನವಾದ ಸ್ಥಾನಮಾನ ಅಸ್ಮಿತೆಗಳನ್ನು ತಂದುಕೊಟ್ಟು ಆಕೆ ಎಲ್ಲೆಲ್ಲಿಯೂ ಸಲ್ಲುವಂತೆ ಮಾಡಿದರು. 'ಶರಣಸತಿ– ಲಿಂಗಪತಿ' ಎಂಬ ಪರಿಕಲ್ಪನೆಯ ಮೂಲಕ ಸಮಸ್ತ ಜೀವ/ಭಕ್ತ ಸಮೂಹ 'ಶರಣಸತಿ'ಯಾಗುವುದರ ಮೂಲಕ ಗಂಡಿಗಿಲ್ಲದ ಘನತೆ ಸ್ತ್ರೀಕುಲಕ್ಕೆ ಬಂದಂತಾಯಿತು. ಗಂಡು 'ಲಿಂಗಪತಿ'ಯನ್ನು ಹೊಂದಲು 'ಶರಣಸತಿ'ಯಾಗಿಯೇ ಭಾವಾರೋಪಮಾಡಿಕೊಂಡು ಸಮರ್ಪಿಸಿಕೊಳ್ಳಬೇಕು. ಇದು ಸ್ತ್ರೀ ಕುಲಕ್ಕೆ ಸಂದ ಪರೋಕ್ಷ ಮನ್ನಣೆಯೇ ಸರಿ.

ಅಂತೆಯೇ 'ಕೂಡಲಸಂಗಮದೇವನ ನಿಲುವು ಕನ್ನೆಯ ಸ್ನೇಹದಂತಿದ್ದಿತ್ತು' ಎನ್ನುವ ಬಸವಣ್ಣನ ಈ ನುಡಿಯಲ್ಲಿ ಅದ್ಭುತವಾದ ಬದಲಾವಣೆಯನ್ನು ಕಾಣಬಹುದಾಗಿದೆ. ದೇವರನ್ನು ಕಾಣಲು ಯಾವ ಮಹಿಳೆ ಯಾವ ಕನ್ಯೆಯು ತೊಡಕಾಗಿದ್ದಳೋ ಅದೇ ಕನ್ಯೆಯ ಸ್ನೇಹದಂತೆ ದೇವರ ಇರುವು ಎಂದು ಸ್ಪಷ್ಟಪಡಿಸಿದ ಬಸವಣ್ಣ ಮೊದಲ ಸ್ತ್ರೀವಾದಿ ಚಿಂತಕನಾಗುತ್ತಾನೆ.

"ಗುಹೇಶ್ವರನ ಸಂಗದಲ್ಲಿ ಸಂದಿಲ್ಲದಿಪ್ಪ ಮಹಾದೇವಿಯಕ್ಕನಿಗೆ ನಮೋ ನಮೋ ಎಂಬೆನು" ಎಂಬ ಅಲ್ಲಮನ ನುಡಿಯಲ್ಲಿ ಗುಹೇಶ್ವರನೆಂಬ ದೇವರಿಗೂ, ಮಹಾದೇವಿಯೆಂಬ ಮಹಿಳೆಗೂ ವ್ಯತ್ಯಾಸವೇ ಇಲ್ಲ. ಅನುಭವ ಮಂಟಪದಲ್ಲಿಯೇ ಉದಾತ್ತ ಚಿಂತಕನಾದ ಅಲ್ಲಮಪ್ರಭು ಅಕ್ಕನಿಗೆ ನಮೋ ನಮೋ ಎಂದು ನಮಿಸಿ ಗೌರವಿಸುವುದು ಶೋಷಿತ ಸಮುದಾಯದ ಸ್ತ್ರೀಯರಿಗೆ ಬಹುಮುಖ್ಯ ಸಂಗತಿಯಾಗುತ್ತದೆ. "ಕೂಡಲಸಂಗಮ ದೇವರಲ್ಲಿ ನಮ್ಮ ಹೆತ್ತತಾಯಿ ಮಹಾದೇವಿಯಕ್ಕಂಗಾಯಿತ್ತು" ಎನ್ನುವ ಬಸವಣ್ಣನ ನುಡಿಯಲ್ಲಿ ಅಕ್ಕ ಹೆತ್ತ ತಾಯಿಯಾಗಿ ಕಾಣುತ್ತಾಳೆ. ಅಂತೆಯೇ 'ಮಹಾದೇವಿಯಕ್ಕನ' ಪಾದವ ನೆನೆದು ಬದುಕಿದೆನು ಎಂದು ಹೇಳುವ ಮಡಿವಾಳ ಮಾಚಯ್ಯ "ಹೆಂಗೂಸೆಂಬ ಭಾವವಳಿದು ಬಯಲು ಬೆರೆಸಿತ್ತು" ಎಂದು ಸ್ಪಷ್ಟಪಡಿಸುವಲ್ಲಿ ಲಿಂಗಾಧಾರಿತ ಅಸಮಾನತೆಯನ್ನು ತಿರಸ್ಕರಿಸುವುದೇ ಆಗಿದೆ.

'ಒಬ್ಬ ಮಹಿಳೆ ಸಾಧಕಳಾಗಿ ಶರಣೆಯಾಗಿ, ಏನೇನು ಗೆದ್ದಳು ಏನೇನು ಆದಳು ಎಂಬುದನ್ನು ಚೆನ್ನಬಸವಣ್ಣ ತನ್ನ ವಚನವೊಂದರಲ್ಲಿ ಸೊಗಸಾಗಿ ಹೇಳಿದ್ದಾನೆ. "ತನುವಿನೊಳಗಿದ್ದು ತನುವ ಗೆಲ್ಲುವ ಮನದೊಳಗಿದ್ದು ಮನವ ಗೆಲ್ಲುವ, ವಿಷಯದೊಳಗಿದ್ದು ವಿಷಯದ ಗೆಲ್ಲುವ ಮಹಾದೇವಿಯಕ್ಕ ಭವಿಯ ಸಂಗದೊಳಿದ್ದು ಭವವ ಗೆದ್ದಳು " ಎಂದು ಹೇಳುವ ಚೆನ್ನಬಸವಣ್ಣನ ನುಡಿಯು ಮಹಿಳಾ ಸಾಧ್ಯತೆಯ ಹಂತಗಳನ್ನು ಸ್ಪಷ್ಟಪಡಿಸುತ್ತದೆ.

'ಎನ್ನ ಭಕ್ತಿಗೆ ನೀ ಶಕ್ತಿಯಾದೆ ಕಾರಣ
ಎನ್ನ ಸತ್ಯಕ್ಕೆ ನೀ ಸತಿಯಾದ ಕಾರಣ

ಎನ್ನ ಸುಖ ದುಃಖ ನಿನ್ನ ಸುಖ ದುಃಖ ಅನ್ಯವಿಲ್ಲ" ಎಂದು ಹೇಳುವ ಮೊಳಿಗೆ ಮಾರಯ್ಯ ಸತಿ–ಪತಿಗಳಲ್ಲಿರುವ ಭೇದವನ್ನು ಅಳಿಸಿ ಹಾಕುತ್ತಾನೆ. ಹೀಗೆ ಇನ್ನೂ ಅನೇಕ ಶರಣರು ಸ್ತ್ರೀಗೆ ಸಮಾನತೆಯನ್ನು ಕೊಟ್ಟು ಶತಮಾನಗಳಿಂದ ಉರುಲಾಗಿದ್ದ ಲಿಂಗಬೇಧನೀತಿಯನ್ನು ಅಲ್ಲಗಳೆದಿದ್ದಾರೆ.

ವಚನ ಚಳುವಳಿಯಲ್ಲಿ ವಿವಿಧ ವರ್ಗದ ಮಹಿಳೆಯರು ಪಾಲ್ಗೊಂಡು ತಮ್ಮ ವೈಚಾರಿಕ ಚಿಂತನೆಗಳಿಂದ ಗಟ್ಟಿಯಾದ ನಿರ್ಧಾರಗಳಿಂದ, ಅಂತೆಯ ಸೈದ್ಧಾಂತಿಕ ನಿಷ್ಠೆಯಿಂದ ವಚನ ಚಳುವಳಿಗೆ ಹೊಸ ದಿಕ್ಕು ತೋರಿಸಿದ ಸೈದ್ಧಾಂತಿಕ ಚರ್ಚೆಯಲ್ಲಿ ಮಹಿಳೆ ಮಹತ್ವದ ಸ್ಥಾನ ವಹಿಸಬಲ್ಲಳೆಂಬುದಕ್ಕೆ ಮುಕ್ತಾಯಕ್ಕ ಮುಖ್ಯ ಉದಾಹರಣೆಯಾದಳು, ಅನುಭಾವದ'ತ್ತರಕ್ಕೇರಿದ ಅಲ್ಲಮನನ್ನೇ ಪ್ರಶ್ನಿಸಿದಳು. ಕೇವಲ ಪ್ರಶ್ನಿಸಿ ಬಿಡಲಿಲ್ಲ ಪರ್ಯಾಯ ಚಿಂತನೆಗಳನ್ನೂ ಕಟ್ಟಿಕೊಟ್ಟಳು. ಅದೇರೀತಿ ಅರ್ಥೈಸಿದಳು. ಸಾಧು–ಸನ್ಯಾಸಿಗಳ ಸ್ವತ್ತಾಗಿದ್ದ ಅಧ್ಯಾತ್ಮವನ್ನು ಸಾಮಾನ್ಯ ಜನತೆಯೆದುರು ಬಿಚ್ಚಿಟ್ಟಳು. ಇಹ ಲೋಕದ ಪತಿ–ಪ್ರಭುವನ್ನು ತಿರಸ್ಕರಿಸಿ ಅಂತರಂಗದ ಪತಿ–ಪ್ರಭುವನ್ನು ಸ್ಥಾಪಿಸಿಕೊಂಡಳು.

ಹೊನ್ನು ಹೆಣ್ಣು ಮಣ್ಣು ಎಂಬ ತ್ರಿವಿಧಗಳು ಸಾಧಕನಿಗೆ ಅಡ್ಡಿಯಾಗುವ ಮಾಯೆ– ಅಜ್ಞಾನ ಎಂಬುದು ಸಾರ್ವತ್ರಿಕವಾಗಿ ಅಂಗೀಕೃತವಾಗಿದ್ದ ನಿಲುವು. ಆದರೆ ಅಲ್ಲಮಪ್ರಭು ತನ್ನ ವಚನವೊಂದರಲ್ಲಿ ಈ ಸಾಂಪ್ರದಾಯಿಕ ಮೌಢ್ಯವನ್ನು

ನುಚ್ಚುನೂರು ಮಾಡಿ ಹೊನ್ನು, ಹೆಣ್ಣು, ಮಣ್ಣು ಮಾಯೆಯಲ್ಲವೆಂದೂ, 'ಮನದ ಮುಂದಣ ಆಸೆಯೇ ಮಾಯೆ' ಎಂದು ತರ್ಕಿಸಿ ಹೊಸ ಹೊಳಪನ್ನು ಕೊಟ್ಟು ಮಾಯೆಯ ನಿಜಸ್ವರೂಪವನ್ನು ಬಯಲುಮಾಡಿದರೆ ಅಕ್ಕಮಹಾದೇವಿಯು ಮಾಯೆಯ ಬಗ್ಗೆ ಅಲ್ಲಮನ ಚಿಂತನೆಯನ್ನೇ ಮುಂದುವರೆಸಿ ತನ್ನ ಚಿಂತನೆಯನ್ನು ವಚನದ ಮೂಲಕ ಹೀಗೆ ಅಭಿವ್ಯಕ್ತಿಸಿದ್ದಾಳೆ.
"ಪುರುಷನ ಮುಂದೆ ಮಾಯೆ

ಸ್ತ್ರೀಯೆಂಬ ಅಭಿಮಾನವಾಗಿ ಕಾಡುವುದು.
ಸ್ತ್ರೀಯ ಮುಂದೆ ಮಾಯೆ

ಪುರುಷನೆಂಬ ಅಭಿಮಾನವಾಗಿ ಕಾಡುವುದು". ಎಂದು ಹೇಳಿ 'ಮಾಯೆ' ಎಂದರೆ 'ಅಜ್ಞಾನ ಮರೆವು' ಅದು ಆತ್ಮಸಾಧಕನಿಗೆ ಕಂಟಕಪ್ರಾಯವಾದುದು. ಅದು ಪುರುಷನ' ಮುಂದೆ ಸ್ತ್ರೀ ಎಂಬ ಅಭಿಮಾನ ಕಾಡಿದರೆ, ಸ್ತ್ರೀಯ ಮುಂದೆ ಪುರುಷನೆಂಬ ಅಭಿಮಾನವಾಗಿ ಕಾಡುತ್ತದೆ. ಎಂಬ ಅಕ್ಕನ ವಿವರಣೆಯಲ್ಲಿ ಅನನ್ಯತೆ ಇದೆ ಮಾಯೆ ಸಾಂಪ್ರದಾಯಿಕವಾಗಿ ನಂಬಿರುವಂತೆ ಹೆಣ್ಣು ಮಾತ್ರವಲ್ಲ, ಗಂಡೂ ಹೌದು ಎನ್ನುತ್ತಾಳೆ ಅಕ್ಕಮಹಾದೇವಿ. ಅಂದರೆ 'ಮಾಯೆ' ಸಾಂದರ್ಭಿಕವಾಗಿ ಹೆಣ್ಣಾಗಿ ಇಲ್ಲವೇ ಗಂಡಾಗಿ ರೂಪಾಂತರಗೊಳ್ಳುತ್ತದ' ಅದು 'ಉಭಯಲಿಂಗಿ' ಎಂದಂತಾಯಿತು. ಅಜ್ಞಾನವೆಂಬುದು ಸದಾ ಸ್ತ್ರೀರೂಪಿ ಅಲ್ಲ ಎಂದು ಸಾಧಿಸಿ ಸ್ತ್ರೀಗೆ ಅಂಟಿದ್ದ ಅಪಕೀರ್ತಿಯನ್ನು ನಿವಾರಿಸಿದ್ದಾಳೆ.

ಅಂತೆಯೇ ಮುಂದುವರೆದು ವ್ರತನಿಷ್ಠೆಯನ್ನು ಹೇಳುವ ಅಕ್ಕಮ್ಮ ಕಾಯಕನಿಷ್ಠೆಯನ್ನು ಕಲಿಸುವ ಆಯ್ದಕ್ಕಿ ಲಕ್ಕಮ್ಮ, ಆಹಾರ ಪದ್ಧತಿಯನ್ನು ಪ್ರಶ್ನಿಸುವ ಕಾಳವ್ವೆ, ಸ್ತ್ರೀ ಸಮಾನತೆಯನ್ನು ಬಯಸುವ ಗೊಗ್ಗವ್ವೆ ಇಂತಹ ಅನೇಕ ಶರಣೆಯರು ವಚನ ಚಳುವಳಿಯ ಕೇಂದ್ರಬಿಂದುವಾದರು. ಇವರಿಲ್ಲದೇ ಚಳುವಳಿಯಿಲ್ಲ, ಇವರಿಲ್ಲದೇ ಸಿದ್ಧಾಂತವಿಲ್ಲವೆನ್ನುವಷ್ಟ'ರಮಟ್ಟಿಗೆ ಈ ವಚನಕಾರ್ತಿಯರು ವಚನ ಚಳುವಳಿಗೆ ಅನಿವಾರ್ಯವಾದರು. ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳಿಂದ ದೂರ ಉಳಿದಿದ್ದ ಮಹಿಳೆ 12ನೇ ಶತಮಾನದಲ್ಲಿ ಮತ್ತೆ ಅಂತಹ ಕ್ಷೇತ್ರಗಳನ್ನು ಪ್ರವೇಶಿಸುವುದರ ಮೂಲಕ ಈ ಎಲ್ಲ ಕ್ಷೇತ್ರಗಳಿಗೆ ಜೀವಂತಿಕೆ ನೀಡಿ ಮಹಿಳಾ ಸಾದ್ಯತೆಗಳನ್ನು ತೋರಿಸಿಕೊಟ್ಟರು ಆದರೆ ಎಂದಿಗೂ ಹೆಣ್ಣೆಂಬ ರಿಯಾಯಿತಿಯನ್ನು ಶರಣೆಯರು ಬಯಸದೆ ಸಮಾನತೆಯ ಹಾದಿಯಲ್ಲಿ ನಡೆದರು.

ಯಾರೂ ಮೇಲಲ್ಲ ಯಾರೂ ಕೀಳಲ್ಲ ಪುರುಷ ಮಹಿಳೆಯರಿಬ್ಬರೂ ಸಮಾನರೆಂಬ ಭಾವವನ್ನು ಹೊಂದಿದ್ದ ಶರಣರು ಸತಿ–ಪತಿಯರು ಸಮಾನರೆಂದು ಸಾರಿ "ಸತಿ–ಪತಿಗಳೊಂದಾದ ಭಕ್ತಿ ಹಿತಮಪ್ಪುದು ಶಿವಂಗೆ "ಎಂದು ನುಡಿದರು ಅಂತೆಯೇ ನಡೆದರು.

ಜೇಡರ ದಾಸಿಮಯ್ಯನು ದೈಹಿಕ ರಚನೆಗನುಗುಣವಾಗಿ ಹೆಣ್ಣು ಗಂಡೆಂಬ ಭೇದವೇ ಹೊರತು "ನಡುವೆ ಸುಳಿವಾತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ " ಎಂದು ಹೇಳಿ ಕೇವಲ ಬಾಹ್ಯವೊಂದನ್ನು ನಂಬಿ ಭೇದ– ಭಾವ ಕಲ್ಪಿಸಿದ್ದ ವರ್ಣಾಶ್ರಮ ಧರ್ಮದ ತಾರತಮ್ಯ ನೀತಿಯನ್ನು ತೀವ್ರವಾಗಿ ವಿಡಂಬಿಸಿದರು. ಗೊಗ್ಗವ್ವೆ ಎಂಬ ವಚನಕಾರ್ತಿಯೂ ತನ್ನ ಒಂದು ವಚನದ ಮೂಲಕ ಇದೇ ವಿಚಾರವನ್ನೆತ್ತಿರುವುದನ್ನು ಕಾಣಬಹುದು.

ಇಂತಹ ಸ್ತ್ರೀಯ ಸರ್ವಶಕ್ತತೆಯನ್ನು ಕಾಯಕಯೋಗಿ ಸಿದ್ದರಾಮನು ಹೀಗೆ ನಿರೂಪಿಸಿದ್ದಾನೆ.

"ತಾ ಮಾಡಿದ ಹೆಣ್ಣು ತನ್ನ ತಲೆಯಸೇರಿತ್ತು
ತಾ ಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು
ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಗೆಯನೇರಿತ್ತು.
ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು.
ಅದು ಕಾರಣ ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ
ಹೆಣ್ಣು ಪ್ರತ್ಯಕ್ಷ ಕಪಿಲಸಿದ್ದ ಮಲ್ಲಿಕಾರ್ಜುನ ನೋಡಾ" ಎಂದಿದ್ದಾರೆ.

ಈ ಸಾಂಕೇತಿಕ ಅಭಿವ್ಯಕ್ತಿಯನ್ನು ಬೆದಕಿದರೆ ಅಲ್ಲಿ ಅರ್ಥಪ್ರಪಂಚವೇ ಧ್ವನಿತರಂಗವೇ ಅಡಗಿದೆ. ಬೌದ್ಧಿಕಶಕ್ತಿಯಾಗಿ, ಜೀವಜಲವಾಗಿ, ಸೃಷ್ಟಿಶಕ್ತಿಯಾಗಿ, ವಿದ್ಯಾಬಲವಾಗಿ, ಆರ್ಥಿಕ ಬಲವಾಗಿ, ಮಿಗಿಲಾಗಿ ತ್ರಿಮೂರ್ತಿಗಳನ್ನು ಕುಣಿಸುವ ಚೈತನ್ಯವಾಗಿ ವ್ಯಾಪಿಸಿದ್ದಾಳೆ. ಆದ್ದರಿಂದ ಮೂಢರು ಆರೋಪಿಸುವಂತೆ ಅವಳು ಬರಿ ಹೆಣ್ಣಲ್ಲ, ರಾಕ್ಷಸಿಯಲ್ಲ, ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನನೇ ಆಗಿದ್ದಾಳೆ. ಎಂದಿರುವ ಸಿದ್ದರಾಮನ ಈ ವಚನಕ್ಕಿಂತಲೂ ಶಕ್ತಿಪೂರ್ಣವಾಗಿ, ಪ್ರತಿಭಾವಿಧಾನದಲ್ಲಿ ಸ್ತ್ರೀಶಕ್ತಿಯ ವಿಶ್ವರೂಪವನ್ನು ಕಾಣಿಸುವುದು ಬೇರೆ ಯಾರಿಗೂ ಸಾಧ್ಯವಾಗಿಲ್ಲವೆಂದೇ ಹೇಳಬೇಕು. ಅಸಮಾನತೆಯನ್ನೊಪ್ಪದ ವಚನ ಚಳುವಳಿಯಲ್ಲಿ ಮುಕ್ತ ಅವಕಾಶಗಳಿದ್ದುದರಿಂದಲೇ ಆಯ್ದಕ್ಕಿಮಾರಯ್ಯ– ಲಕ್ಕಮ್ಮ, ಉರಿಲಿಂಗಪೆ'ದ್ದಿ –ಕಾಳವ್ವೆ, ಕುಂಬಾರಗುಂಡಯ್ಯ– ಕೇತಲದೇವಿ ಮೊದಲಾದ ಜೋಡಿಗಳು ಕಾಯಕದೊಟ್ಟಿಗೆ ವಚನ ಸೃಷ್ಟಿಯಲ್ಲಿ ತೊಡಗಿದ್ದುದನ್ನು ಕಾಣಬಹುದು. ಹೀಗೆ 800 ವರ್ಷಗಳ ಹಿಂದೆಯೇ ಮಹಿಳೆಯರಿಗೆ ಸಮಾನ ಅವಕಾಶ ನೀಡಿದ ಶರಣರ ಸಮಾನತೆಯ ನೀತಿಯನ್ನು ನಾವು ಇನ್ನು ಮುಂದಾದರು ಅನುಸರಿಸಬೇಕಾಗಿದೆ, ನುಡಿದಂತೆ ನಡೆದ ಶರಣರ ಬದುಕು ನಮಗೆ ಮಾದರಿಯಾಗಬೇಕಿದೆ.

**ಪರಾಮರ್ಶನ ಗ್ರಂಥಗಳು**


1. ಬಸಣವಣ್ಣನವರ ವಚನಗಳ ಸಮಾಲೋಕನ – (ಪ್ರ.ಸಂ.) ಡಾ.ಬಿ.ಆರ್. ಹಿರೇಮಠ
2. ಸಮಗ್ರ ವಚನ ಸಂಪುಟ –1 – ಕರ್ನಾಟಕ ಸರ್ಕಾರ
3. ಅಲ್ಲಮನ ವಚನಗಳು – (ಸಂ) ಡಾ. ಎಲ್. ಬಸವರಾಜು
4. ದೇವರ ದಾಸಿಮಯ್ಯನ ವಚನಗಳು – (ಸಂ) ಡಾ.ಎಲ್. ಬಸವರಾಜು
5. ಬಸವಣ್ಣನವರ ವಚನಗಳು – (ಸಂ) ಡಾ.ಎಲ್. ಬಸವರಾಜು